ಈ) ಈ ಯೋಜನೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಮೈಸೂರು ನಗರ ಪಾಲಿಕೆಗೆ ಸಂಬಂಧಿಸಿದಂತೆ, 92-93, 93-94 ಮತ್ತು 94-95, 95-96ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಗುರಿ ನೀಡಿ, 4329 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು 3610 ಮನೆಗಳನ್ನು ವಿತರಿಸಲಾಗುತ್ತಿದೆ. 1997-98ನೇ ಮಾರ್ಚ್ ತಿಂಗಳಲ್ಲಿ ಸರ್ಕಾರ 500 ಮನೆಗಳನ್ನು ಮೈಸೂರು ನಗರಕ್ಕೆ ನೀಡಲಾಗಿದೆ. 97-98ನೇ ಸಾಲಿನಲ್ಲಿ ನಗರ ಪಾಲಿಕೆಯಿಂದ ಯಾವ ಸಭೆಯನ್ನು ನಡೆಸಿರುವುದಿಲ್ಲ. ಕಾರಣ ಸಾರ್ವತ್ರಿಕ ಚುನಾವಣೆ ನಿಮಿತ್ತ ಸಭೆ ನಡೆಸುವುದು ಚುನಾವಣೆ ಸಂಹಿತೆಯನುಸಾರನೀತಿ ಬಾಹಿರವಾಗಿರುವುದರಿಂದ ಸಭೆ ನಡೆಸುವುದನ್ನು ಮುಂದೂಡಲಾಯಿತು.

ಆ) ಇಲ್ಲ

ಇ) ಇಲ್ಲ

ಈ) ಮೈಸೂರು ಪಟ್ಟಣದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲ. ಖಾಸಗಿ ಮಾಲೀಕರು ಆಶ್ರಯ ಯೋಜನೆ ಕಾರ್ಯಕ್ರಮಕ್ಕಾಗಿ ಭೂಮಿಯನ್ನು ನೀಡಲು ಸಮ್ಮತಿಸುತ್ತಿಲ್ಲ. ಜೀವನಕ್ಕಾಗಿ ಭೂಮಿಯನ್ನು ಏಕೈಕ ಆಧಾರವನ್ನಾಗಿ ಅವಲಂಭಿಸುವುದರಿಂದ ರೈತರ ಕುಟುಂಬಗಳು ಬೀದಿ ಪಾಲಾಗದಂತೆ, ಇದನ್ನು ಮಾನವೀಯ ದೃಷ್ಟಿಯಿಂದ ಪರಿಶೀಲಿಸಿ, ಭೂ ಮಾಲೀಕರ ಮನವೊಲಿಸಿ ಜಮೀನನ್ನು ಸಂಧಾನದ ಮೂಲಕ ಮಾರುಕಟ್ಟೆ ಬೆಲೆಗೆ ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಅಲ್ಲದೇ ಮೈಸೂರು ಪಟ್ಟಣದಲ್ಲಿ ಭೂಮೌಲ್ಯ ಗಗನಕ್ಕೇರಿದ್ದು, ಅಪಾರವಾದ ಹಣವನ್ನು ಭೂ ಖರೀದಿಗಾಗಿ ವೆಚ್ಚ ಮಾಡಬೇಕಾದ ಪರಿಸ್ಥಿತಿ ಇರುವುದರಿಂದ, ಮೈಸೂರು ಪಟ್ಟಣದಲ್ಲಿ ಆಶ್ರಯ ಹಂಚಿಕೆ ಕಾರ್ಯಕ್ರಮ ನಿರೀಕ್ಷಿಸಿದಂತೆ ಪ್ರಗತಿ ಸಾಧಿಸಲಾಗುತ್ತಿಲ್ಲ.

ರಾಜಾಜಿನಗರ ವಿಧಾನ ಸಭಾಕ್ಷೇತ್ರದಲ್ಲಿನ ಕೊಳಚೆ ಪ್ರದೇಶಗಳು

144(238) ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಸೇರಿದ ಎಷ್ಟು ಕೊಳಚೆ ಪ್ರದೇಶಗಳು ರಾಜಾಜಿನಗರ ವಿಧಾನ ಸಭಾ ಕ್ಷೇತ್ರ ದ ವ್ಯಾಪ್ತಿಯಲ್ಲಿವೆ?

ಆ) ಈ ಪ್ರದೇಶಗಳಲ್ಲಿ ಕಳೆದ 3 ವರ್ಷಗಳಲ್ಲಿ ಕೈಗೊಳ್ಳಲಾಗಿರುವ ಅಭಿವೃದ್ಧಿ ಕಾರ್ಯಗಳ ವಿವರಗಳನ್ನು ನೀಡುವುದು?

ಇ) ಈ ಪ್ರದೇಶಗಳಲ್ಲಿ ವಾಸವಿರುವ ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ನೀಡಲಾಗಿದೆಯೇ; ಹಾಗಿದ್ದಲ್ಲಿ ಅವುಗಳ ಸಂಪೂರ್ಣ ವಿವರ ಒದಗಿಸುವುದು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ರಾಜಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಕಾರ್ಯವ್ಯಾಪ್ತಿಗೆ ಒಳಪಡುವ 5 ಕೊಳಚೆ ಪ್ರದೇಶಗಳಿರುತ್ತವೆ.

ಅ) ಕಳೆದ ಮೂರು ವರ್ಷಗಳಲ್ಲಿ ಮಂಡಳಿಯ ವತಿಯಿಂದ ಕೈಗೊಳ್ಳಲಾಗಿರುವ ಅಭಿವೃದ್ಧಿ ವಿವರಗಳು ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

ಕೊಳಚೆ ಪ್ರದೇಶದ	1994-95	1995-96	1996-97
ಎ. ಡಿ. ಹಳ್ಳಿ ಕೊಳಚೆ ಪ್ರದೇಶ	ಕಿರುನೀರು ಸರಬರಾಜು ಹಾಸುಗಲ್ಲು ರೂ. 1.50	ಕಿರುನೀರು ಸರಬರಾಜು ಚರಂಡಿ ರೂ. 2.50	ವಸತಿ ಗೃಹಗಳ ವಿಶೇಷ ದುರಸ್ತಿ ಕಾಮಗಾರಿಗಳು (ಭಾವಣಿಗೆ ಮಡ್ಡಿ ಹಾಕುವುದು) ರೂ. 11.50
ಗಜಾನನ ಟಾಕೀಸ್	ಕಿರು ನೀರು ಸರಬರಾಜು ರೂ. 1.00	ಹಾಸುಗಲ್ಲು ಚರಂಡಿ ರೂ.0.80	ಒಳಚರಂಡಿ: ಮೆಟ್ಟಿಲುಗಳು ರೂ. 1.00
ಭೋವಿ ಪಾಳ್ಯ	ಇಲ್ಲ	ಇಲ್ಲ	ಚರಂಡಿ ಕೆಲಸ ರೂ. 1.00
ಗೊರಗುಂಟೆಪಾಳ್ಯ	ಇಲ್ಲ	ಇಲ್ಲ	ಒಳಚರಂಡಿ ರೂ. 1.00
ಇಂದಿರಾ ನಗರ	ನ್ಯಾಯಾಲಯದಲ್ಲಿ ತಗಾದೆ ಇರುವ ಕಾರಣ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ		

ಇ) ಮೇಲ್ಕಂಡ 5 ಕೊಳಚೆ ಪ್ರದೇಶಗಳ ಪೈಕಿ ಅಗ್ರಹಾರ ದಾಸರಹಳ್ಳಿ ಕೊಳಚೆ ಪ್ರದೇಶಗಳಲ್ಲಿ 210 ಮನೆಗಳನ್ನು ಕಟ್ಟಲಾಗಿದ್ದು, ಈ ಫಲಾನುಭವಿಗಳ ಪೈಕಿ ಪ್ರಾರಂಭಿಕ ಠೇವಣಿ, ನೋಂದಣಿ ಶುಲ್ಕವನ್ನು ಮಂಡಳಿಗೆ ಪಾವತಿಸಿರುವ 102 ಫಲಾನುಭವಿಗಳಿಗೆ ಮಾತ್ರ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಉಳಿದ 4 ಕೊಳಚೆ ಪ್ರದೇಶಗಳಲ್ಲಿ ವಸತಿ ಗೃಹ ಯೋಜನೆಯನ್ನು ಕೈಗೊಂಡಿರುವುದಿಲ್ಲ.

ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ಹೌಸಿಂಗ್ ಬೋರ್ಡ್ ಮನೆಗಳು.

145 (239) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರವಿಸುವರೆ ?

ಅ) ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ (ಹಂತ 1 ಮತ್ತು 2) ಇರುವುದೇ ನಿಜವೇ; (ಈ ಎರಡೂ ಹಂತಗಳಲ್ಲಿ ಗೃಹ ಮಂಡಳಿ ಹಂಚಿಕೆಯಾಗಿರುವ ಮನೆಗಳ ವಿವರಗಳನ್ನು ನೀಡುವುದು).